Sri B. P. KADAM.—May I know whether the claims have been finally settled and how much time it will take, if not already settled ?

Sri B. RACHAIAH.—Certain particulars have been called for. Soon after they are received all the claims will be settled.

Sri B. P. KADAM.—Is it a fact that the wives of the affected officials have represented by way of personal letters to the Minister-in-charge that they have sold the last ounce of their ornaments, including the 'Mangalasutra' because the salaries of their husbands have not been paid ?

Sri B. RACHAIAH.—The wife of one official represented sometime ago that T. A. claims had not been settled. The amount involved is only Rs. 30. Certain particulars have been called for from the official in question, which have not been furnished.

Sri B. P. KADAM.—Is it a fact that the amounts mentioned here are not correct ?

Mr. SPEAKER.—The Hon'ble Member cannot say that the answer is wrong. He may ask for details.

Scarcity conditions prevailing in some of the villages of Begur and Terakanambi Hoblis in Gundlupet Taluk.

*Q.—141. **Smt. K. S. NAGARATHNAMMA** (Gundlupet).—

Will the Government be pleased to state :—

(*a*) whether sowing operation has been done in all the places in Gundlupet Taluk ;

(*b*) whether it has come to their notice that acute scarcity conditions are prevailing in some of the villages of Begur and Terakanambi Hoblis in Gundlupet Taluk ;

(*c*) the amount of takavi loan distributed to the ryots of the above mentioned villages ;

(*d*) the arrangements they intend making for providing fodder to their cattle ?

*A.—**Sri M. V. KRISHNAPPA** (Minister for Revenue).—

(*a*) Yes.

(*b*) No.

(*c*) Out of an allotment of Rs. 30,500 under Takavi Loan, a sum of Rs. 21,250 has been distributed in this area.

(*d*) In view of the recent rains, the question of making arrangements for supply of fodder does not arise.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಗುಂಡ್ಲುಪೇಟೆ ತಾಲ್ಲೂಕಿನ ಬೇಗೂರು ಮತ್ತು ತೆರಕಣಾಂಬಿ ಹೋಬಳಿಗಳಿಗೆ ಸೇರಿದ ಕೆಲವು ಗ್ರಾಮಗಳಲ್ಲಿ ಮಳೆಯೇ ಆಗಿಲ್ಲ. ಹಾಗಿದ್ದರೂ ಆ ಪ್ರದೇಶದಲ್ಲಿ ಬಿತ್ತನೆ ಕೆಲಸ ಆಗಿದೆ ಎಂದು ಉತ್ತರದಲ್ಲಿ ಹೇಳಿದ್ದೀರಿ, ಯಾವ ಆಧಾರದಮೇಲೆ ಅಲ್ಲಿ ಬಿತ್ತನೆಯಾಗಿದೆ ಎಂದು ಹೇಳಿದಿರಿ, ಮಳೆ ಬೀಳದೆ ಇದ್ದರೂ ಬಿತ್ತನೆ ಹೇಗಾಗುತ್ತದೆ ? ತಾವು ರೈತರ ಮಕ್ಕಳಾಗಿ ತಮಗೆ ಆ ವಿಚಾರದಲ್ಲಿ ಅನುಭವ ಇಲ್ಲವೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಆ ತಾಲ್ಲೂಕಿನಲ್ಲಿ ಎಲ್ಲಾ ಕಡೆಯೂ ಮಳೆ ಬೀಳುವುದಿಲ್ಲ ಎಂದು ಹೇಳುವುದಕ್ಕಾಗುವುದಿಲ್ಲ. ಕೆಲವು ಭಾಗಗಳಲ್ಲಿ ಮಳೆ ಬದ್ದು ಬತ್ತನೆ ಆಗಿದೆ. ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಹೋದವರ್ಷ ಬೆಳೆಗಳು ಸ್ವಲ್ಪ ನಷ್ಟವಾಗಿವೆ. ಅದಕ್ಕೋಸ್ಕರ ಮಾನ್ಯ ಸದಸ್ಯರಿಗೆ ಗೊತ್ತಿರುವ ಹಾಗೆ ಅಲ್ಲಿ ಕೆಲವು ರಿಲೀಫ್ ಕೆಲಸಗಳನ್ನು ಏರ್ಪಾಡು ಮಾಡಿದೆ. ಆದರೆ ಆ ರಿಲೀಫ್ ಕೆಲಸಗಳಿಗೆ ಜನಗಳೇ ಬರುತ್ತಿಲ್ಲವೆಂದು ಅಲ್ಲಿನ ಅಧಿಕಾರಿಗಳು ರಿಪೋರ್ಟ್ ಮಾಡುತ್ತಿದ್ದಾರೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಮಳೆ ಬಾರದೆ ಇರುವ ಜಾಗಗಳಲ್ಲಿ ಗೋ ಕಟ್ಟೆ ಕೆಲಸವನ್ನು ತೆಗೆದುಕೊಂಡು ರಿಲೀಫ್ ವರ್ಕ್ಸ್ ಮಾಡುತ್ತೇವೆಂದರೆ ಜನಗಳು ಎಲ್ಲಿಂದ ಬರುತ್ತಾರೆ? ಗುಂಡ್ಲುಪೇಟೆ ತಾಲ್ಲೂಕಿನ ಬೇಗೂರು ಮತ್ತು ತೆರಕಣಾಂಬಿ ಹೋಬಳಿಗಳಿಗೆ ಸೇರಿದ ಭಾಗದಲ್ಲಿ ಕೆಲವು ಗ್ರಾಮಗಳಲ್ಲಿ ತೀವ್ರ ಅಭಾವ ಪರಿಸ್ಥಿತಿ ಉಂಟಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ಎಂದು ಕೇಳಿದರೆ ಬಂದಿಲ್ಲ ಎಂದು ಹೇಳಿದ್ದಾರೆ. ಗ್ರಾಮಪಂಚಾಯಿತಿಗಳವರು ರೆಸುಲ್ಯೂಷನ್ ಮಾಡಿ ಸರ್ಕಾರಕ್ಕೆ ಕಳುಹಿಸಿದರೂ ಅದು ನಮಗೆ ಬಂದಿಲ್ಲ ಎಂದು ಹೇಳುತ್ತಾರೆ. ಹಾಗಾದರೆ ಆ ವಿಚಾರ ಸರ್ಕಾರದ ಗಮನಕ್ಕೆ ಬರುವಹಾಗೆ ಮಾಡುವ ಬಗೆ ಹೇಗೆ?

ಶ್ರೀ ಎಂ. ವಿ. ಕೃಷ್ಣಪ್ಪ.—ನಮಗೆ ಅಲ್ಲಿನ ಜಿಲ್ಲಾಧಿಕಾರಿಗಳಿಂದ ವರದಿಗಳು ಬರುತ್ತಿವೆ. ಗುಂಡ್ಲುಪೇಟೆ ತಾಲ್ಲೂಕಿಗೆ ಇದುವರೆಗೂ ನಾನು ಹೋಗಿಲ್ಲ. ಬಹುಶಃ ಅಧಿವೇಶನ ಮುಗಿದಮೇಲೆ ಅಲ್ಲಿಗೆ ಹೋಗಿ ಅಲ್ಲಿನ ಪರಿಸ್ಥಿತಿಯನ್ನು ನೋಡಿಕೊಂಡು ಆ ಬಗ್ಗೆ ತಕ್ಕ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈಗ ತಮಗೆ ಬಂದಿರುವ ವರದಿಯ ಪ್ರಕಾರ ಬೇಗೂರು ಮತ್ತು ತೆರಕಣಾಂಬಿ ಹೋಬಳಿಗಳಲ್ಲಿ ಎಷ್ಟು ಇಂಚು ಮಳೆ ಬಿದ್ದಿದೆ?

Mr. SPEAKER.—The question has been answered already.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ತಕಾವಿ ಸಾಲದ ಬಾಬಿನಲ್ಲಿ ಒದಗಿಸಿದ್ದ 30,500 ರೂಪಾಯಿಗಳಲ್ಲಿ 21,350 ರೂಪಾಯಿಗಳನ್ನು ಆ ಪ್ರದೇಶಕ್ಕೆ ಹಂಚಲಾಗಿದೆ ಎಂದು ಹೇಳಿದ್ದೀರಿ, ಹಾಗಾದರೆ ಈ ಹಣದಲ್ಲಿ ಆ ಪ್ರದೇಶದ ಜನಗಳಿಗೆ ಎಷ್ಟೆಷ್ಟು ಹಣವನ್ನು ಹಂಚಲಾಗಿದೆ? ಆ ಹಣದಲ್ಲಿ ಒಬ್ಬೊರಿಗೆ 2-3 ನಯಾಪೈಸೆಗಳು ಹಂಚಿಕೆಯಾಗಿರಬೇಕಲ್ಲವೇ?

ಶ್ರೀ ಎಂ. ವಿ. ಕೃಷ್ಣಪ್ಪ.—64ನೆಯ ಫ್ಯಾಮಿನ್‌ಹೆಡ್‌ನಲ್ಲಿ ಆ ಪ್ರದೇಶಕ್ಕೆ 30 ಸಾವಿರ ರೂಪಾಯಿಗಳನ್ನು ಕೊಟ್ಟಿದ್ದೇವೆ. ಕಮ್ಯುನಿಕೇಷನ್ನಿಗೆ 7 ಸಾವಿರ ರೂಪಾಯಿಗಳನ್ನು ಕೊಟ್ಟಿದ್ದೇವೆ. ರಸ್ತೆಗಳ ಕೆಲಸ ಮತ್ತು ಇರಿಗೇಷನ್ನಿಗಾಗಿ 15 ಸಾವಿರ ರೂಪಾಯಿಗಳನ್ನು ಕೊಟ್ಟಿದ್ದೇವೆ. 8 ಸಾವಿರ ರೂಪಾಯಿಗಳನ್ನು ಇತರೆ ಕೆಲಸಗಳಿಗೆ ಕೊಟ್ಟಿದ್ದೇವೆ. ಬಾವಿಗಳಿಗೋಸ್ಕರ 1½ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ. ಇನ್ನೂ ಬೇರೆ ಬೇರೆ ಐಟಮ್‌ಗಳಲ್ಲಿಯೂ ನಹ ಆ ಪ್ರದೇಶದಲ್ಲಿ ಹಣವನ್ನು ಖರ್ಚುಮಾಡುತ್ತಿದ್ದೇವೆ. ಮಾನ್ಯ ಸದಸ್ಯರಾದ ಶ್ರೀಮತಿ ನಾಗರತ್ನಮ್ಮನವರು ಅರಿಸಿ ಬಂದಿರುವ ಕ್ಷೇತ್ರವಾದ ಗುಂಡ್ಲುಪೇಟೆ ಮತ್ತು ಚಾಮರಾಜನಗರ ಈ ಪ್ರದೇಶಗಳಲ್ಲಿ ಬತಳ ಅಭಾವ ಇದೆ. ಆದ್ದರಿಂದ ಆ ಪ್ರದೇಶಕ್ಕೆ ಒದಗಿಸಿರತಕ್ಕ ಹಣವನ್ನು ಖರ್ಚುಮಾಡಬೇಕೆಂದು ಅಲ್ಲಿನ ಡಿಫಿಜನರ್ ಕಮೀಷನರು ಮತ್ತು ಡೆಪ್ಯುಟೀ ಕಮೀಷನರಿಗೆ ಹೇಳಿದ್ದೇವೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಆ ರೈತರುಗಳ ಜಾನುವಾರುಗಳಿಗೆ ಒಣಮೇವನ್ನು ಒದಗಿಸಲು ಯಾವ ಏರ್ಪಾಡುಗಳನ್ನು ಮಾಡಬೇಕೆಂದು ಸರ್ಕಾರದವರು ಉದ್ದೇಶಿಸಿದ್ದಾರೆ ಎಂದು ಕೇಳಿದ ಪ್ರಶ್ನೆಗೆ ಉತ್ತರವಾಗಿ ತದನಂತರ ಆ ಪ್ರದೇಶದಲ್ಲಿ ಮಳೆಯಾದ್ದರಿಂದ ಒಣಮೇವನ್ನು ಸರಬರಾಯಿ ಮಾಡಬೇಕಾಗಿಲ್ಲ ಎಂದು ಹೇಳಿದ್ದಾರೆ. ಆ ಪ್ರದೇಶದ ಅಭಾವ ಪರಿಸ್ಥಿತಿಯ ಬಗ್ಗೆ ಡೆವಲಪ್‌ಮೆಂಟ್ ಕೌನ್ಸಿಲ್‌ನಲ್ಲಿ ಚರ್ಚೆಯಾಗಿಲವೇ? ಅದು ಸರ್ಕಾರದ ಗಮನಕ್ಕೆ ಬಂದಿಲ್ಲವೇ? ಕೋರಾರ, ತುಮಕೂರು ಮತ್ತು ಚಿತ್ರದುರ್ಗ ಈ ಪ್ರದೇಶದ ಪರಿಸ್ಥಿತಿಯ ಬಗ್ಗೆ ಮಾತ್ರ ನರಿಯಾಗಿ ವರದಿಗಳು ಬರುತ್ತವೆ. ನಮ್ಮ ಜಿಲ್ಲೆಯಲ್ಲಿರತಕ್ಕ ಪರಿಸ್ಥಿತಿಯ ಬಗ್ಗೆ ಮಾತ್ರ ವರದಿಗಳು ನರಿಯಾಗಿ ಬಾರದೆ ಇರುವುದಕ್ಕೆ ಕಾರಣವೇನು?

ಶ್ರೀ ಎಂ. ವಿ. ಕೃಷ್ಣಪ್ಪ.—ನಮ್ಮ ನಂನ್ಥಾನದಲ್ಲಿ ಮುಖ್ಯವಾಗಿ ಕೋರಾರ, ಬಜಾಪುರ, ಚಿತ್ರದುರ್ಗ, ತುಮಕೂರು ಜಿಲ್ಲೆಯ ಕೆಲವು ಭಾಗಗಳು, ರಾಯಚೂರು, ಈ ಪ್ರದೇಶಗಳನ್ನು ಸ್ಕೇರ್‌ಸಿಟಿ ಏರಿಯಾ ಎಂದು ಪರಿಗಣಿಸಿದ್ದೇವೆ. ಅದರ ಜೊತೆಗೆ ನಾಗಮಂಗಲ, ಮಂಡ್ಯಾ ತಾಲ್ಲೂಕಿನಲ್ಲಿ ಒಂದು ಹೋಬಳಿ ಅಭಾವಕ್ಕೆ ಒಳಗಾಗಿದೆ. ಆಮೇಲೆ ಮೈಸೂರು ಜಿಲ್ಲೆಯಲ್ಲಿ ನಂಜನಗೂಡು, ಚಾಮರಾಜನಗರ, ಗುಂಡ್ಲುಪೇಟೆ, ಕೃಷ್ಣರಾಜಪೇಟೆ, ತರೀಕೆರೆ, ಶಿವಮೊಗ್ಗ ಜಿಲ್ಲೆಯ ಕೆಲವು ಭಾಗಗಳು ಇವುಗಳನ್ನೆಲ್ಲಾ ಸೇರಿಸಿ ಸ್ಕೇರ್‌ಸಿಟಿ ಏರಿಯಾ ಎಂದು ಮಾಡಿದ್ದೇವೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಮುಳೆ ಬಾರದೆ ತೊಂದರೆಯಾಗಿರುವ ಗುಂಡ್ಲುಪೇಟೆ ತಾಲ್ಲೂಕಿನ ಬೇಗೂರು ಮತ್ತು ತೆರಕಾಣಾಂಬಿ ಪ್ರದೇಶದ ರೈತರುಗಳಿಗೆ ಭೂಕಂದಾಯವನ್ನು ಮನ್ನಾಮಾಡಲು ಸರ್ಕಾರದವರು ನಿಜವಾಗಿಯೂ ಪ್ರಯತ್ನ ಮಾಡುತ್ತಾರೆಯೇ ?

ಶ್ರೀ ಎಂ. ಪಿ. ಕೃಷ್ಣಪ್ಪ.—ನಾನು ಆ ಪ್ರದೇಶಕ್ಕೆ ಹೋಗಿ ಅಲ್ಲಿ ನಿಜವಾದ ಪರಿಸ್ಥಿತಿ ಏನಿದೆ ಎಂಬುದನ್ನು ನೋಡಿಕೊಂಡು ಬಂದು ಅಲ್ಲಿ ತಕ್ಕ ಕಾರ್ಯಕ್ರಮವನ್ನು ಕೈಗೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

———

Hardships caused to the people of Hiremalali Village due to the digging of the Tunnel in their lands.

*Q.—37. Sri KUNDUR RUDRAPPA (Channagiri).—

Will the Government be pleased to state :—

(*a*) whether they are aware of the hardships caused to the people of Hiremalali Village, affected by the digging of the Tunnel in their lands ;

(*b*) whether the Chief Minister and the Public Works Minister have not assured these affected people during their tour in the said area, that they would be given reasonable compensation ;

(*c*) the action they have taken in this behalf ?

*A.—Sri VEERENDRA PATIL (Minister for Public Works) [on behalf of SRI S. NIJALINGAPPA (Chief Minister)].—

(*a*) Yes.

(*b*) Representations in this behalf have been made to Government.

(*c*) The matter is under examination.

ಶ್ರೀ ಕುಂದೂರು ರುದ್ರಪ್ಪ.—'ಗೊತ್ತಿದೆ' ಎಂದರೆ ಏನು ಗೊತ್ತಿದೆ, ಸ್ವಾಮಿ ? ಚಾನಲ್ ಡಿವಿಷನ್ನಿನವರು ಬಹಳ ಆಳವಾಗಿ ಚಾನಲ್ ತೆಗೆದಿರುವುದರಿಂದ ಆ ಗ್ರಾಮದವರಿಗೆ ಕುಡಿಯಲು ನೀರಿಲ್ಲದೆ ಚಾನಲ್ ಡಿವಿಷನ್ನಿನವರು ಸ್ಪೆಷಲ್ಲಾಗಿ ನೀರನ್ನು ನಷ್ಟೈ ಮಾಡುತ್ತಿದ್ದಾರೆ. ನನಗೂ ನಿಮಗೂ ಗೊತ್ತಿದ್ದರೂ ಈ ಸಭೆಗೆ ಗೊತ್ತಿಲ್ಲ. ಐದು ಸಾವಿರ ಪ್ರಜಾಸಂಖ್ಯೆ ಇರುವ ಗ್ರಾಮಕ್ಕೆ ಮುಂದೆ ಕುಡಿಯುವ ನೀರಿಗೆ ಗತಿ ಏನು ಸ್ವಾಮಿ ?

†ಶ್ರೀ ವೀರೇಂದ್ರ ಪಾಟೀಲ್.—ಯಾವ ಪ್ರಶ್ನೆ ಕೇಳಿದ್ದೀರೋ ಅದಕ್ಕೆ 'ಗೊತ್ತಿದೆ' ಎಂದು ಹೇಳಿದ್ದೇನೆ. ನಾನು ಮಾನ್ಯ ಸದಸ್ಯರ ಜೊತೆಗೆ ಹೋಗಿ ಅಲ್ಲಿ ನೋಡಿದ್ದೇನೆ. ಚಾನಲ್ ಕೂಡ ನೋಡಿದ್ದೇನೆ. ಚಾನಲ್ ತೆಗೆದದ್ದರಿಂದ ನೀರು ಬತ್ತಿಹೋಗಿದೆ. ಕುಡಿಯುವ ನೀರಿನ ಕಷ್ಟವಿದೆ. ಈಗ ತಾತ್ಕಾಲಿಕವಾಗಿ ಅಲ್ಲಿರುವ ಕಾರೋನಿಯಿಂದ ಬೋರ್‌ವೆಲ್ ನೀರನ್ನು ಕೊಡುತ್ತಿದೆ. ಆ ಊರನ್ನು ಬೇರೆ ಕಡೆಗೆ ಬದಲಾಯಿಸಬೇಕೆಂಬ ಉದ್ದೇಶವಿದೆ. ಅದಕ್ಕೆ ಅಲ್ಲಿರುವ ಎರಡು ಪಕ್ಷಗಳಲ್ಲಿ ಒಬ್ಬರು ಒಪ್ಪಿದರೆ ಇನ್ನೊಬ್ಬರು ಒಪ್ಪುವುದಿಲ್ಲ. ಊರಿನ ಎಲ್ಲ ಭಾಗಗಳಿಗೂ ಈ ಚಾನಲ್‌ನಿಂದ ತೊಂದರೆಯಾಗಿಲ್ಲ. ತೊಂದರೆಯಾಗಿರುವವರು ಬೇರೆಕಡೆ ಹೋಗಲು ಒಪ್ಪಿದರೆ, ತೊಂದರೆಯಾಗದೆ ಇರುವವರು ಒಪ್ಪುತ್ತಿಲ್ಲ. ಇದರಿಂದ ಊರನ್ನು ಬೇರೆಕಡೆ ಬದಲಾಯಿಸುವುದಕ್ಕೆ ಕಷ್ಟವಾಗಿದೆ. ಚಾನಲ್‌ನಲ್ಲಿ ಇನ್ನೂ ನೀರನ್ನು ಬಿಟ್ಟಿಲ್ಲ. ನೀರು ಬಿಟ್ಟಮೇಲೆ ಅದರ behaviour ಹೇಗಿರುತ್ತದೆ, seepage ನೀರಿನಿಂದ ಯಾವ ರೀತಿಯಾಗುತ್ತದೆ ಎಂದು ನೋಡಿಕೊಂಡು ಅನಂತರ shift ಮಾಡುವುದನ್ನು ಯೋಚಿಸಬೇಕಾಗುತ್ತದೆ. Shift ಮಾಡಬೇಕಾದರೆ ಕಾಂಪೆನ್‌ಸೇಷ್ ಕೊಡುವುದಕ್ಕೆ, ಪುನರ್ವಸತಿ ಮಾಡುವುದಕ್ಕೆ ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕೋ ಅದನ್ನೆಲ್ಲ ತೆಗೆದುಕೊಳ್ಳುತ್ತೇವೆ.

ಶ್ರೀ ಕುಂದೂರು ರುದ್ರಪ್ಪ.—ಬೇರೆ ಕಡೆಗೆ ಯಾರಾದರೂ ಹೋಗಲಿ, ಬಿಡಲಿ ಮುಂದೆ ಅವರಿಗೆ ನೀರಿನ ಗತಿ ಏನು ಸ್ವಾಮಿ ?